**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 16/2023 ಪಿ.ಡಬ್ಲ್ಯೂಃ 5

ಸಿ.ಡಬ್ಲ್ಯೂಃ 29

| | |
|---|---|
| ಸಾಕ್ಷಿದಾರರ ಹೆಸರು | ಮೊಹಮದ್ ಇಸ್ಮಾಯಿಲ್ |
| ತಂದೆಯ ಹೆಸರು | ಆಹಮದ್ ಶರೀಫ್ |
| ವಯಸ್ಸು | 32 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಬೈಪಾಸ್ ರಸ್ತೆ, 1 ನೇ ತಿರುವು, ಶಿವಮೊಗ್ಗ |

ದಿನಾಂಕಃ 08-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) 2016 ರ ಸಾಲಿನಲ್ಲಿ ನಾನು ಜಗದೀಶ್ ಎಂಬವರಿಂದ ಅಶೋಕ್ ಲೈಲ್ಯಾಂಡ್ ದೋಸ್ತ ಮಿನಿ ಗೂಡ್ಸ ವಾಹನ ಸಂಖ್ಯೆ ಕೆಎ-14-ಬಿ-4539 ನೇದನ್ನು ಖರೀದಿಸಿದ್ದೆ. ಅದರ ಮೇಲೆ ಸಾಲ ಇದ್ದುದರಿಂದ ಅದನ್ನು ನನ್ನ ಹೆಸರಿಗೆ ಬದಲಾಯಿಸಿಲ್ಲ. ನಾನು ಜಿಪಿಎ ಪಡೆದುಕೊಂಡು ಅದನ್ನು ಓಡಿಸುತ್ತಿದ್ದೆ. ಅದನ್ನು ನಾನೇ ಓಡಿಸುತ್ತಿದ್ದೆ. ಆ ವಾಹನವನ್ನು ನನ್ನ ಮನೆಯ ಮುಂಭಾಗದಲ್ಲಿರುವ ಎಸ್ .ಎಸ್ ಸರ್ವಿಸ್ ಸ್ಟೇಷನ್ ನ ಮುಂಭಾಗದಲ್ಲಿ ರಾತ್ರಿ ನಿಲ್ಲಿಸುತ್ತಿದ್ದೆ. ಅದು ಶಿವಮೊಗ್ಗದ ಬಿ.ಹೆಚ್ ರೋಡಿನ ಬೈಪಾಸ್ ರಸ್ತೆ.

2) ದಿಃ 15-08-2018 ರ ರಾತ್ರಿ ಆ ವಾಹನವನ್ನು ಅಲ್ಲಿ ನಿಲ್ಲಿಸಿದ್ದೆ. ತಾರೀಕು 16-08-2018 ರಂದು ಬೆಳಿಗ್ಗೆ ಗಾಡಿಯನ್ನು ನೋಡಿದಾಗ ಅದು ಅಲ್ಲಿ ಇರಲಿಲ್ಲ. ಅದಕ್ಕಾಗಿ ತಾರೀಕು 09-10-2018 ರಂದು ಶಿವಮೊಗ್ಗದ ದೊಡ್ಡಪೇಟೆಯ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ಅದಕ್ಕಾಗಿ ವರ್ತಮಾನವನ್ನು ದಾಖಲಿಸಿದ್ದರು. ಸದರಿ ವರ್ತಮಾನವನ್ನು ಈಗ ನೋಡಿ ಅದನ್ನು ನಿಶಾನೆ ಪಿ-5 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-5(ಎ) ಎಂದು ಗುರುತಿಸಿದ್ದೇನೆ.

3) ದೂರು ಕೊಟ್ಟ ಸುಮಾರು ಒಂದು ವರ್ಷದ ನಂತರ ದೊಡ್ಡಪೇಟೆ ಪೊಲೀಸರು ನನಗೆ ಪೋನ್ ಮಾಡಿ ಕಳೆದಿದ್ದ ನನ್ನ ವಾಹನ ಸಿಕ್ಕಿರುವುದಾಗಿ, ಅದು ಕಾಪು ಠಾಣೆಯಲ್ಲಿ ಇರುವುದಾಗಿ ಹೇಳಿದ್ದರು. ಅದಕ್ಕಾಗಿ ನಾನು ಕಾಪು ಠಾಣೆಗೆ ಬಂದು ಅಲ್ಲಿ ಇದ್ದ ನನ್ನ ವಾಹನವನ್ನು ನೋಡಿ ಗುರುತಿಸಿದ್ದೆ. ನನ್ನ ವಾಹನದ ಚೆಸ್ಸಿ ನಂಬ್ರ ಮತ್ತು ಇಂಜಿನ್ ನಂಬ್ರಗಳು ಇರಲಿಲ್ಲ. ನಂಬ್ರ ಪ್ಲೇಟ್ ಇರಲಿಲ್ಲ. ನಾನು ಖರೀದಿಸುವ ಮೊದಲು ಸಹ ಅದರ ವಿಂಡ್‌ಸ್ಕ್ರೀನ್ ಮೇಲೆ ಶ್ರೀ ಲಕ್ಷ್ಮೀ ವಿಘ್ನೇಶ್ವರ ಎಂಬ ಸ್ಟಿಕ್ಕರ್ ಅಂಟಿಸಿದ್ದರು. ನಾನು ಅದನ್ನು ತೆಗೆದಿರಲಿಲ್ಲ. ಆದ್ದರಿಂದ ಅದನ್ನು ನೋಡಿದಾಗ ತಕ್ಷಣವೇ ಗುರುತಿಸಿದ್ದೆ.

4) ನಂತರ ನಮ್ಮ ವಾಹನವನ್ನು ಶಿವಮೊಗ್ಗ ದೊಡ್ಡಪೇಟೆ ಠಾಣೆಗೆ ವರ್ಗಾಯಿಸಿದ್ದರು. ವಾಹನ ಕಳೆದಿದ್ದರಿಂದ ನನ್ನ ಮತ್ತು ಪೈನ್ಯಾನ್ಸನವರ ನಡುವೆ ತಕರಾರುಗಳು ಇದ್ದುದರಿಂದ ನಾನು ವಾಹನವನ್ನು ಬಿಡಿಸಿಕೊಂಡಿಲ್ಲ. ಈಗಲೂ ಸಹ ಆ ವಾಹನ ದೊಡ್ಡಪೇಟೆ ಠಾಣೆಯಲ್ಲಿ ಇದೆ. ಕಾಪು ಠಾಣೆಯಲ್ಲಿ ಸಹ ನನ್ನನ್ನು ವಿಚಾರಿಸಿದ್ದರು. ಆಗ ನಾನು ಹೇಳಿಕೆಯನ್ನು ಸಹ ಕೊಟ್ಟಿದ್ದೆ. ನಂತರ ನನ್ನ ವಾಹನವನ್ನು 1 ಮತ್ತು 2 ನೇ ಆರೋಪಿತರು ಕದ್ದಿದ್ದರು ಎಂದು ತಿಳಿದಿತ್ತು. ಅವರು ಕಳ್ಳತನ ಮಾಡಿದ ಜಾಗೆಯನ್ನು ತೋರಿಸಲು ಬಂದಾಗ, ಪೊಲೀಸರು ನನಗೆ ಅವರನ್ನು ತೋರಿಸಿದ್ದರು. ಅವರನ್ನು ನೋಡಿದರೆ ಗುರುತಿಸಬಲ್ಲೆ. 1 ಮತ್ತು 2 ನೇ ಅರೋಪಿತರು ಕದ್ದ ವಾಹನವನ್ನು 4 ನೇ ಅರೋಪಿಗೆ ಮಾರುತ್ತಿದ್ದರು ಎಂದು ತಿಳಿದಿತ್ತು. ಆತನನ್ನು ಸಹ ನಮ್ಮ ಮನೆಯ ಬಳಿ ಕರೆತಂದಿದ್ದರು. 1 ನೇ ಅರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

ಪಾಟಿಸವಾಲುಃ ಆರೋಪಿ ತಲೆತಪ್ಪಿಸಿಕೊಂಡಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಂಡಿತು. **ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ